ಅ) ಶ್ರೀ ಬನ್ನಾಡಿ ಪದ್ಮನಾಭ ಭಟ್ಟ ಮತ್ತು ಕೆಲವು ಕಂದಾಯ ಅಧಿಕಾರಿಗಳು ಪೋರ್ಜರಿ ವ್ಯವಹಾರದಲ್ಲಿ ಮುಖ್ಯ ಕೈವಾಡ ಹೊಂದಿರುವರೆಂದು ಕಂಡುಬಂದಿರುತ್ತದೆ.

ಇ) ಭೂ ಸುಧಾರಣಾ ವಿಶೇಷ ತಹಸೀಲ್ದಾರ್ ಶ್ರೀ ಎ. ಪಿ. ಗೋವಿಂದಯ್ಯ ಮತ್ತು ಶಿರಸ್ತೆದಾರ್ ಶ್ರೀ ಪುರುಷೆಟ್ಟಿಗಾರ್ ಇವರು ಈ ಪ್ರಕರಣದಲ್ಲಿ ಶಾಮೀಲಾಗಿದ್ದಂತೆ ಕಂಡುಬಂದಿದ್ದು ಅವರಿಬ್ಬರನ್ನೂ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ. 39 ಎಡಿಇ 85 ದಿನಾಂಕ 25-4-85ರಲ್ಲಿ ಅಮಾನತ್ತಿನಲ್ಲಿರಿಸಲಾಗಿದೆ ಮತ್ತು ಇಲಾಖಾ ತನಿಖೆ ಪ್ರಾರಂಭವಾಗಿರುತ್ತದೆ.

ಈ) ಮೊಬಲಗು ರೂ. 42,487-00 ಈ ಪ್ರಕರಣದಲ್ಲಿ ಒಳಗೊಂಡಿರುತ್ತದೆ.

ಉ) ಉಡುಪಿ ಟೌನ್ ಪೋಲೀಸ್ ಸ್ಟೇಷನ್ನಿನಲ್ಲಿ ಬನ್ನಾಡಿ ಪದ್ಮನಾಭಭಟ್ಟ ಇವರ ವಿರುದ್ಧ ದೂರು ನೀಡಲಾಗಿ ಪೋಲಿಸ್ ವಿಚಾರಣೆ ನಡೆದು ಈಗ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ನನ್ನ ಗಮನಕ್ಕೆ ಪತ್ರಿಕೆಯ ಮೂಲಕ ಬಂತು. ಅಡಿಗರ ಹೆಸರಿನಲ್ಲಿ ಹಣವನ್ನು ಪೋರ್ಜರಿ ಮಾಡಿ ದೋಚಿದ್ದಾರೆಂದು ತಿಳಿದ ಕೂಡಲೇ ಸಂಬಂಧಿಸಿದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿಸಿ ಇನ್‌ವೆಸ್ಟಿಗೇಷನ್‌ಗೆ ಆರ್ಡರ್ ಹೊರಡಿಸಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.—ಇದರಲ್ಲಿ ಕೆಲವು ಅಧಿಕಾರಿಗಳು ಶಾಮೀಲಾಗಿದ್ದಾರಂತೆ. ಈಗ ಸಸ್ಪೆಂಡ್ ಆಗಿರುವವರನ್ನು ಹೊರತುಪಡಿಸಿ ಬೇರೆಯವರ ಮೇಲೂ ತನಿಖೆ ಮಾಡಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಬಳಿ ನಿಖರವಾದ ವಿವರಗಳಿದ್ದರೆ ಅಗತ್ಯವಾಗಿ ಮಾಡಿಸುತ್ತೇನೆ. ಈಗ ಸಸ್ಪೆಂಡ್ ಮಾಡಿರುವವರ ಮೇಲೆ ಆಗಲೇ ಚಾರ್ಜ್‌ಶೀಟ್ ಹಾಕಿಯಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಆ ಬನ್ನಾಡಿ ಪದ್ಮನಾಭ ಭಟ್ಟರನ್ನು ಏಕೆ ದಸ್ತಗಿರಿ ಮಾಡಲಿಲ್ಲ ? ಮಾಡಿದ್ದರೆ ವಿವರ ಸಿಗುತ್ತಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿವರಗಳನ್ನೆಲ್ಲಾ ಸಂಗ್ರಹಿಸಿಯೇ ಅವರ ಮೇಲೆ ಕೇಸ್ ಹಾಕಿರುವುದು.

ಶ್ರೀ ಬಿ. ಎಂ. ಇದಿನಬ್ಬ.—ಇದೇನೋ ಅಪ್ಪಿತಪ್ಪಿ ಸರ್ಕಾರದ ಗಮನಕ್ಕೆ ಬಂತು, ನೀವು ಕೇಸ್ ಹಾಕಿಸಿದಿರಿ. ಆದರೆ ಬೇರೆ ನ್ಯಾಯ ಮಂಡಲಿಗಳಲ್ಲಿ ಏನೇನಾಗಿದೆ ಎಂಬುದನ್ನೆಲ್ಲ ಹೇಗೆ ಪತ್ತೆಹಚ್ಚುವಿರಿ? ಪಾಪ, ಬಡವರನ್ನು ಮುಳುಗಿಸಿಬಿಡಬೇಡಿ. ಬಡಜನತೆ ಯಾರ ಬಳಿ ತಮ್ಮ ಅನ್ಯಾಯವನ್ನು ಹೇಳಿಕೊಳ್ಳಬೇಕು ? ಅವರನ್ನು ಕೇಳುವವರು ಯಾರು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕಾಗಿಯೇ ಕ್ರಾಸ್ಡ್ ಚೆಕ್ ಮೂಲಕ ಪೇಮೆಂಟ್ ಮಾಡಿಸುವ ವ್ಯವಸ್ಥೆ ಮಾಡಿದ್ದೇನೆ. ಬೇರೆಯವು ಇದ್ದರೆ ತನಿಖೆ ಮಾಡಿಸುತ್ತೇನೆ.

ವಿಷಯ ; ಸಹಕಾರಿ ಸಂಘಗಳ ಸಾಲ ವಸೂಲಾತಿಯ ಬಗ್ಗೆ.

ಪ್ರ. ಸಂಖ್ಯೆ 84 (218) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಮಳೆ ಇಲ್ಲದಿರುವ ಪ್ರದೇಶಗಳಲ್ಲೂ ಕೂಡ ಸಹಕಾರಿ ಸಂಘಗಳಿಂದ ಸಾಲ ವಸೂಲಿಗಾಗಿ ಜಪ್ತಿ ನಡೆಸುತ್ತಿರುವುದು ಆಕ್ಷೇಪಣೀಯವಾಗಿದ್ದು ತಾತ್ಕಾಲಿಕವಾಗಿ ವಸೂಲಿಯನ್ನು ತಡೆಯಲು ಆಜ್ಞೆಯನ್ನು ಹೊರಡಿಸಲಾಗುವುದೇ ;

ಆ) ಸೊಂಡೂರು ಕ್ಷೇತ್ರದ ತಾಳೂರು ಗ್ರಾಮದಲ್ಲಿ ಜಪ್ತಿ ನಡೆಸಿರುವುದನ್ನು ತಡೆಯಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗುವುದೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು),—

ಅ) ಬರಗಾಲ ಪೀಡಿತ ಪ್ರದೇಶಗಳಲ್ಲಿ ಅಣೇಲಾರಿ ಆರಾಣಿಗಿಂತ ಕಡಿಮೆ ಘೋಷಿಸಲ್ಪಟ್ಟಲ್ಲಿ ಚಾಲ್ತಿ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಬಹುದಾಗಿದೆ. ಸಹಕಾರಿ ಸಾಲಗಳ ವಸೂಲಾತಿಯಲ್ಲಿ ಉದ್ದೇಶ ಪೂರ್ವಕ ಸುಸ್ತಿದಾರರಲ್ಲದವರಿಗೆ, ವಿಶೇಷತಃ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಯಾವ ತೊಂದರೆಯೂ ಆಗದಂತೆ ಎಚ್ಚರಿಕೆ ವಹಿಸಲಾಗಿದೆ.

ಆ) ದೊರೆತಿರುವ ಮಾಹಿತಿಗನುಸಾರವಾಗಿ ಸೊಂಡೂರು ಕ್ಷೇತ್ರದ ತಾಳೂರು ಗ್ರಾಮದಲ್ಲಿ ಸಹಕಾರ ಸಂಘ ಸಾಲ ವಸೂಲಾತಿಗಾಗಿ ಯಾವ ಜಪ್ತಿ ಕ್ರಮ ತಗೆದುಕೊಂಡಿರುವುದಿಲ್ಲ.

ಶ್ರೀ ಯು. ಭೂಪತಿ.—ನಾನು ಬರಗಾಲ ಪೀಡಿತ ಪ್ರದೇಶದಲ್ಲಿ ಅಂತ ಪ್ರಶ್ನೆ ಕೇಳಲಿಲ್ಲ. ಮಳೆ ಇಲ್ಲದಿರುವ ಪ್ರದೇಶಗಳಲ್ಲಿ ಎಂದು ಕೇಳಿದ್ದೇನೆ, ಮಳೆ ಎಲ್ಲಿ ಬಿದ್ದಿಲ್ಲ ಅಂತಹ ಸ್ಥಳಗಳಲ್ಲಿ ಸಹಕಾರಸಂಘಗಳಲ್ಲಿ ಸಾಲದ ವಸೂಲಿಗಾಗಿ, ಜಪ್ತಿ ಮಾಡಿರತಕ್ಕಂಥಾದ್ದು ನಿಜವೇ ? ಸೊಂಡೂರು ಕ್ಷೇತ್ರದ, ತಾಳೂರು ಗ್ರಾಮದಲ್ಲಿ ಜಪ್ತಿ ನಡೆದಿರುವುದಿಲ್ಲವೆಂದು ತಮ್ಮ ಉತ್ತರದಲ್ಲಿದೆ. ಆದರೆ, ಸಹಕಾರ ಸಂಘದ ಅಧ್ಯಕ್ಷರು ನನಗೆ ಹೇಳಿದ ಪ್ರಕಾರ ದನಕರುಗಳನ್ನು ಮನೆಯಲ್ಲಿ ಹಾಕಿ, ಗಂಡಸರು ಮನೆಯಲ್ಲಿ ಇಲ್ಲವೆಂದು ಹೆಂಗಸರು ಹೇಳಿದರೂ ಕೂಡ, ಮನೆಗೆ ಬೀಗ ಹಾಕತಕ್ಕಂತಹ ಪ್ರಕರಣ ನಡೆದಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಳೆ ಇಲ್ಲದ ಪ್ರದೇಶವನ್ನು ಬರಗಾಲ ಪ್ರದೇಶವೆಂದು ನಾನು ತಿಳಿದುಕೊಂಡಿದ್ದೇನೆ. ಮಳೆ ಬೀಳದಿರುವ ಪ್ರದೇಶಗಳಲ್ಲಿ ಬಾವಿಗಳ ಅನುಕೂಲ ಇದೆಯೋ ಇಲ್ಲವೋ ಗೊತ್ತಿಲ್ಲ. ಈರುಳ್ಳಿ ದುತ್ತು ಕಡಲೇಕಾಯಿ ಬೆಳೆಗೆ ಸಾಲ ಕೊಡಲಾಗಿದೆ. ಬರಗಾಲ ಪೀಡಿತ ಪ್ರದೇಶವಾಗಿದ್ದರೆ ಸಾಲ ವಸೂಲಾತಿಯನ್ನು ಮುಂದಕ್ಕೆ ಹಾಕುವ ಅವಕಾಶ ಇದೆ. ತಾಳೂರು ಗ್ರಾಮಾದ ಸಹಕಾರ ಸಂಘಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರುನವರು ಫೈನಾನ್ಸ್ ಮಾಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯೊಳಗೆ 73 ಹಳ್ಳಿಗಳಿವೆ. ಅದರಲ್ಲಿ 32 ಹಳ್ಳಿಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಡಿಕ್ಲೇರ್ ಮಾಡಿದ್ದೇವೆ. ತಾಳೂರು ಗ್ರಾಮಾದಲ್ಲಿ 38ರಿಂದ 50ರವರೆಗೆ ಕ್ರಾಪ್ ಇತ್ತು. ಆದ್ದರಿಂದ ಆ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಡಿಕ್ಲೇರ್ ಮಾಡುವುದಕ್ಕಾಗುವುದಿಲ್ಲ. 1983-84ರಲ್ಲಿ 4ಲಕ್ಷ 13 ಸಾವಿರ ರೂ. ವಸೂಲಾಗಿದೆ. ಆ ವರ್ಷ ವಸೂಲಾಗಬೇಕಾದ್ದು 4 ಲಕ್ಷ 43 ಸಾವಿರ ರೂ. ಒಟ್ಟು 12ಲಕ್ಷ 43 ಸಾವಿರ ವಸೂಲಾಗಬೇಕಿತ್ತು. ಇನ್ನು 8ಲಕ್ಷ ವಸೂಲಾಗದೆ ಹಾಗೇ ಉಳಿದಿದೆ. ಬಹಳಷ್ಟು ಜನಗಳು ಈರುಳ್ಳಿ ಮೇಲೆ ಅಡ್ವಾನ್ಸ್ ತೆಗೆದು ಕೊಂಡಿದ್ದಾರೆ. ಅದರಲ್ಲಿ 33 ಪರ್ಸೆಂಟ್ ಮಾತ್ರ ವಸೂಲಾಗಿದೆ. ಕೊ-ಇನ್‌ಸೈಡ್ ಮಾಡಿಲ್ಲ. ಡಿಕ್ರಿ ತೆಗೆದುಕೊಂಡಿರುವ ಸಣ್ಣ ರೈತರು 18 ಜನ ; ಅವರ ಮೇಲೆ ಇರತಕ್ಕಂತಹ ಸಾಲ 31,745 ರೂ. 3 ಜನ ಹರಿಜನರು ಡಿಕ್ರಿ ತೆಗೆದುಕೊಂಡಿದ್ದಾರೆ. ಅವರ ಮೇಲೆ ಇರತಕ್ಕಂತಹ ಸಾಲ 13,360 ರೂ. ದೊಡ್ಡ ರೈತರು 120 ಜನ ಡಿಕ್ರಿ ತೆಗೆದುಕೊಂಡಿದ್ದಾರೆ. ಒಟ್ಟು ಸಾಲದ ಬಾಕಿ 4,15,690 ರೂ. ಯಾರ ಮನೆಯನ್ನು ಜಪ್ತಿ ಮಾಡಿಲ್ಲವೆಂದು ಅಧಿಕಾರಿಗಳು ಹೇಳಿದ್ದಾರೆ. ಇತ್ತೀಚೆಗೆ 10-7-85ರಲ್ಲಿ ಒಂದು ಸರ್ಕ್ಯುಲರ್ ಹೊರಡಿಸಿದ್ದೇವೆ. ಏನೆಂದರೆ Proposals for taking co-ercive action against small medium and large farmers should be sent to Government for clearance and such proposals should clearly indicate the names of the defaulter whether they are small, medium or large farmers, whethre they default is wilful and whether action against all other large defaulter in the surrounding areas has been taken. "This is the recent circular that we have sent. If there are any particular instances the hon'ble member may pass on the information and It will definetely take action. ಇದರ ಬಗ್ಗೆ ತಮಗೆ ಏನಾದರೂ ಮಾಹಿತಿ ಇದ್ದರೆ ಕಳಿಸಿಕೊಡಿ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ. ಸಾಲ ವಸೂಲಾತಿ ಎಲ್ಲಾ ಕಡೆ ನಡೆದಿದೆ. ನಿನ್ನೆ ನಾನು ಹೇಳಿದ ಹಾಗೆ ಮಾನ್ಯ ಜಾಲಪ್ಪನವರ ಮೇಲೆ ತಪ್ಪು ಹೊರಿಸುವ ಹಾಗಿಲ್ಲ. ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ಮುಂದಿನ ಆಣಿವಾರಿಯನ್ನು ಎಲ್ಲರೂ ಸತ್ತ ಮೇಲೆ ಮಾಡುತ್ತೀರ ? ಬೆಳೆ ಇಲ್ಲದೇ ಇದ್ದಾಗ ಆಣಿವಾರಿ ಪ್ರಶ್ನೆ ಬರುವುದೇ ಇಲ್ಲ. ಮಾನ್ಯ ಬೊಮ್ಮಾಯಿಯವರು ಒಪ್ಪಿದ ಪ್ರಕಾರ ಸೂಟು ಬಿಡಬಹುದು.

ಶ್ರೀ ಎಸ್. ಆರ್ ಬೊಮ್ಮಾಯಿ.—ಹೋದ ವರ್ಷ ಆಣಿವಾರಿ ಬರೆದಿದ್ದೇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದರ ಬಗ್ಗೆ ನೋಟಿಫಿಕೇಷನ್ ಹೊರಡಿಸಿದ್ದೇವೆ.

ಶ್ರೀ ಯು ಭೂಪತಿ.—ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಯಾವುದು ಬರಗಾಲ ಪೀಡಿತ ಪ್ರದೇಶವೆಂದು ನನಗೆ ಗೊತ್ತಾಗಲಿಲ್ಲ. ಬರಗಾಲ ಪೀಡಿತ ಪ್ರದೇಶದ ಬಗ್ಗೆ ಸರ್ಕಾರ ಅಧಿಕೃತವಾಗಿ ಘೋಷಣೆ ಮಾಡುತ್ತದೆ. ಆದೇ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಮಳೆ ಇಲ್ಲದ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಹೇಳಿದರು. ತಾಳೂರು ಗ್ರಾಮದಲ್ಲಿ ಬಾವಿಗಳು ಜಾಸ್ತಿ ಇವೆ. ಮಳೆ ಇಲ್ಲದಿರುವುದರಿಂದ ಬಾವಿಗಳಲ್ಲಿ ನೀರೆ ಇಲ್ಲ. ಆಲ್ಲಿ ಬಂದಿರತಕ್ಕಂತಹ ಬೆಳೆ ಎಂದರೆ ಈರುಳ್ಳಿ ಒಂದೇ, ಅದಕ್ಕೆ ಸರಿಯಾದ ದರ ಇಲ್ಲದೇ ಇರುವುದರಿಂದ ಕೂಡಲೆ ಮಾರಾಟ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಮಾರಾಟ ಮಾಡುವುದಕ್ಕೆ ಮುಂಚಿತವಾಗಿ ಜಪ್ತಿ ಮಾಡಿದರೆ ಏನು ಪ್ರಯೋಜನ ?

ಶ್ರೀ ಆರ್. ಎಲ್. ಜಾಲಪ್ಪ.—ಸಹಕಾರ ಸಂಘದವರು ಜಪ್ತಿಗೆ ಹೋಗಿದ್ದರು. ಅಲ್ಲಿ 20-30 ಸಾವಿರ ರೂ. ಬೆಲೆ ಬಾಳುವ ಈರುಳ್ಳಿ ಇದ್ದರೂ ಜಪ್ತಿ ಮಾಡಿಲ್ಲ. ಅದಕ್ಕಾಗಿ ಮಾನ್ಯ ಸದಸ್ಯರು ಸರ್ಕಾರವನ್ನು ಅಭಿನಂದಿಸಬೇಕು. ಈ ವರ್ಷ 19 ಜಿಲ್ಲೆಗಳ ಪೈಕಿ 17 ಜಿಲ್ಲೆಗಳಿಗೆ ಜಿಲ್ಲಾ ಬ್ಯಾಂಕಿನವರು ಸಾಲ ಕೊಡುವಂತಹ ಎಲಿಜಿಬಲಿಟಿ ಬಂದಿದೆ. ಸಾಲ ವಸೂಲು ಮಾಡುವುದನ್ನು ನಿಲ್ಲಿಸುವಂತೆ ಅಧಿಕಾರಿಗಳಿಗೆ ತಿಳಿವಳಿಕೆ ಕೊಟ್ಟಿದ್ದೇವೆ. ಸಾಲ ವಸೂಲು ಮಾಡದೇ ಇದ್ದರೆ, ಪುನಃ ಸಾಲ ಕೊಡುವುದಾದರೂ ಹೇಗೆ ? ಇದರಿಂದ ಬಹಳ ತೊಂದರೆಯಾಗಿದೆ.

ವಿಷಯ.—ಸವದತ್ತಿಯಲ್ಲಿರುವ ಶ್ರೀ ಎಲ್ಲಮ್ಮ ದೇವಸ್ಥಾನದಿಂದ ಬರುವ ಆದಾಯ

ಪ್ರ. ಸಂಖ್ಯೆ 85 (260) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಸವದತ್ತಿ ಎಲ್ಲಮ್ಮ ದೇವಸ್ಥಾನದ ಆಡಳಿತ ಯಾರ ವಶದಲ್ಲಿದೆ, ಹಾಗೂ ಸದರೀ ದೇವಸ್ಥಾನದಿಂದ ಕಳೆದ ನಾಲ್ಕು ವರ್ಷಗಳಲ್ಲಿ ಸಂದಾಯವಾದ ವರಮಾನವೆಷ್ಟು :

ಆ) ಸವದತ್ತಿ ಪುರಸಭೆ ಹಾಗೂ ದೇವಸ್ಥಾನದ ಧರ್ಮದರ್ಶಿಗಳ ನಡುವೆ ಹೊಂದಾಣಿಕೆ ಇಲ್ಲದಿದ್ದು ಇದರಿಂದ ಭಕ್ತಾದಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ ಅವರಿಬ್ಬರ ನಡುವೆ ಇರುವ ವೈಮನಸ್ಸನ್ನು ತೊಡೆದು ಹಾಕಿ ದೇವರ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮಂತ್ರಿಗಳು).—

ಅ) ಇದು ಮುಜರಾಯಿ ಸಂಸ್ಥೆಯಾಗಿದ್ದು ಸರ್ಕಾರದ ವಶದಲ್ಲಿದೆ. ಸದರೀ ದೇವಾಸ್ಥಾನಕ್ಕೆ ಕಳೆದ ನಾಲ್ಕು ವರ್ಷಗಳಲ್ಲಿ ಸುದಾಯವಾದ ವರಮಾನವು ಈ ಕೆಳ ಕಂಡಂತಿದೆ ;

1981-82	9,85,866-45
1982-83	10.31,349-97
1983-84	11,84 728-65
1984-85	15,18,412-92
ಒಟ್ಟು	47,20,357-99

ಆ) ಸವದತ್ತಿ ಪುರಸಭೆ ಹಾಗೂ ದೇವಾಸ್ಥಾನ ಧರ್ಮದರ್ಶಿಗಳ ನಡುವೆ ಹೊಂದಾಣಿಕೆ ಇದ್ದು ಈ ಕ್ಷೇತ್ರಕ್ಕೆ ಬರುವ ಭಕ್ತಾದಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಇ) ಮೇಲೆ ಹೇಳಿದ ಉತ್ತರದ ಪ್ರಯುಕ್ತ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಸವದತ್ತಿ ನಗರಸಭೆ ಮತ್ತು ದೇವಸ್ಥಾನದ ಆಡಳಿತ ಮಂಡಳಿಗೂ ವಿವಾದ ಇತ್ತು. ಈ ಬಗ್ಗೆ ಕಂದಾಯ ಕಾರ್ಯದರ್ಶಿಯವರು ದಿನಾಂಕ 8-1-85 ರಂದು ಜಂಟಿ ಸಭೆ ಕರೆದು, ನಗರಸಭೆ, ಮತ್ತು ದೇವಸ್ಥಾನದ ಟ್ರಸ್ಟ್ ಯಾವ ರೀತಿ ಕೆಲಸ ಮಾಡಬೇಕೆಂದು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸವದತ್ತಿ ಎಲ್ಲಮ್ಮ ದೇವಸ್ಥಾನ ಕರ್ನಾಟಕಕ್ಕೆ ದೊಡ್ಡ ಕ್ಷೇತ್ರವಾಗಿದೆ. ಅಲ್ಲಿ ತಿರುಪತಿ ಮಾದರಿಯ ರೀತಿ ಅಧಿಕಾರೇತರರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಜೊತೆಗೆ ಅಲ್ಲಿ ಎಷ್ಟು ಹಣ ಜಮಾ ಆಗಿದೆ. ಅದನ್ನು ವಿದ್ಯಾ ಸಂಸ್ಥೆಗಳಿಗೆ ಖರ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಹಳ ವರ್ಷಗಳ ಹಿಂದೆ ಈ ದೇವಸ್ಥಾನದ ಬಗ್ಗೆ ಒಂದು ಕಾನೂನಾಗಿದೆ. ಆದರೆ, ಕೆಲವರು, ಹೈಕೋರ್ಟ್, ಸುಪ್ರೀಂ ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಪೂಜಾರಿಗಳು ಮತ್ತು ಇತರ ವ್ಯಕ್ತಿಗಳು ನಡುವೆ ವಿವಾದ ಇದೆ. ಮಾನ್ಯ ಸದಸ್ಯರು ಹೇಳಿದಂತೆ ತಿರುಪತಿ ಕ್ಷೇತ್ರದ ಮಾದರಿಯಂತೆ ಈ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಬೇಕೆಂಬ ಇಚ್ಛೆ ಸರ್ಕಾರಕ್ಕೆ ಇದೆ. ಇಲ್ಲಿಗೆ ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಅನೇಕ ಜನ ಭಕ್ತರು ಬರುತ್ತಿದ್ದಾರೆ. ಇಲ್ಲಿನ ಆದಾಯ ಕೂಡ ಚೆನ್ನಾಗಿದೆ. ಆದರಲ್ಲಿ ಬಂದ ಹಣದಲ್ಲಿ 3ಲಕ್ಷ 80 ಸಾವಿರ ರೂ ಖರ್ಚು ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದೇವೆ. 9 ಲಕ್ಷ ಹಣವನ್ನು ಖರ್ಚು ಮಾಡಿ ಯಾತ್ರಿಕರು ತಂಗುವುದಕ್ಕೆ ಮಳಿಗೆಗಳನ್ನು ಕಟ್ಟಿಸತಕ್ಕಂತಹ ಯೋಜನೆ ಇದೆ.